♦ ಕೇಂದ್ರ ಸರ್ಕಾರ ಯೋಜನೆಯಾದ ತಾಂತ್ರಿಕ ಉನ್ನತೀಕರಣ ನಿಧಿ ಯೋಜನೆಯಡಿ (TUFS) ಆಧುನೀಕರಣ ಹಾಗೂ ವಿಸ್ತರಣೆಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ ಮುಂದುವರೆದು ಎನ್.ಸಿ.ಡಿ.ಸಿ. ಯೋಜನೆಯಡಿ ಸರ್ಕಾರದ ಮುಖಾಂತರ ಸಹಕಾರಿ ನೂಲಿನ ಗಿರಣಿಗಳ ಪುನಶ್ಚೇತನಕ್ಕೆ ಸಾಲ ಸೌಲಭ್ಯ ಒದಗಿಸಿದೆ.

♦ ಸಹಕಾರಿ ವಲಯದ ನೂಲಿನ ಗಿರಣಿಗಳಲ್ಲಿ ಸರ್ಕಾರದ ಸಾಲವನ್ನು ಶೇರು ಧನವಾಗಿ ಪರಿವರ್ತಿಸಲಾಗಿದೆ.

♦ ನೇಕಾರರ ವಿಶೇಷ ಪ್ಯಾಕೇಜ್ ಅನುಮೋದಿಸಿದ್ದು, 10 ಹೆಚ್.ಪಿ. 10 ವಿದ್ಯುತ್ ಮಗ್ಗಗಳು ಇರುವಂತಹ ಘಟಕಗಳಿಗೆ ರಿಯಾಯಿತಿ ನೀಡಲಾಗುತ್ತಿದೆ.

1837(2321) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗದ ವಸತಿ ನಿಲಯಗಳಲ್ಲಿ ಪ್ರತಿ ಮಕ್ಕಳಿಗೆ ತಲಾ ವೆಚ್ಚ ನೀಡುತ್ತಿರುವುದು ಹಿಂದಿನ ವರ್ಷದ ಕನಿಷ್ಠ ಪ್ರಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ನಿರ್ವಹಣಾ ವೆಚ್ಚ ಈಗ ದುಬಾರಿಯಾಗಿರುವುದರಿಂದ ವಸತಿ ನಿಲಯಗಳಲ್ಲಿ ಮಕ್ಕಳಿಗೆ ಆರೋಗ್ಯ ಮತ್ತು ಉತ್ತಮ ವ್ಯವಸ್ಥೆ ಒದಗಿಸುವಲ್ಲಿ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಇ) ಹಾಗಿದ್ದಲ್ಲಿ, ಹೆಚ್ಚಿನ ಸೌಲತ್ತು ಒದಗಿಸಲಾಗುವುದೆ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಬಂದಿರುತ್ತದೆ.

ಇ) ಆಯವ್ಯಯದ ಲಭ್ಯತೆಯನ್ನನುಸರಿಸಿ ಹೆಚ್ಚಿನ ಸವಲತ್ತು ಒದಗಿಸುವುದನ್ನು ಪರಿಶೀಲಿಸಲಾಗುವುದು.

1838(2841) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾನುವಾರು ಗಣತಿಯ ಪ್ರಕಾರ ಜಾನುವಾರು ಮತ್ತು ಕುಕ್ಕುಟ ಸಂಪತ್ತಿನ ವಿವರಗಳೇನು:

ಆ) ಜಾನುವಾರುಗಳ ಆರೋಗ್ಯ ಸಂರಕ್ಷಣೆಗಾಗಿ ಮತ್ತು ಅಭಿವೃದ್ಧಿಗಾಗಿ ಒಟ್ಟು ಎಷ್ಟು ಪಶುವೈದ್ಯಕೀಯ ಆಸ್ಪತ್ರೆಗಳು ಚಿಕಿತ್ಸಾಲಯಗಳು ಹಾಗೂ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ:

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಪಶುವೈದ್ಯಕೀಯ ಕೇಂದ್ರಗಳ ಸೇವೆ ಏನು?